SRI K. PRABHAKAR (Minister for Rural Development and Panchayati Raj).—

(a) 77.

(b) 12.

(c) No.

ಶ್ರೀ ಬಿ.ಬಿ. ಚಿಮ್ಮನಕಟ್ಟಿ. - ಸ್ವಾಮಿ, ನನ್ನ 'ಆ' ಪ್ರಶ್ನೆ ವಿಚಾರಿಸಿ ಬಹುದಿನ ತಾಲ್ಲೂಕಿನಲ್ಲಿ ಕೊಳವೆ ಬಾವಿಗಳನ್ನು ತೋಡಿಸಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡಲು ಸರಕಾರದವರಿಗೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೆ. ಅದೇ ಮುಂದಿನ ಪ್ರಶ್ನೆಯಲ್ಲಿ ಕುಡಿಯುವ ನೀರಿನ ಅಭಾವವಿರುವ ಪ್ರದೇಶಗಳಲ್ಲಿ ಕೊಳವೆ ಬಾವಿಗಳನ್ನು ತೋಡಿಸಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಸುವುದಕ್ಕೆ ಈ ವರೆಗೂ ಬಂದಿರುವ ಅರ್ಜಿಗಳನ್ನು ಕೈಗೊಳ್ಳದಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ಎಂದು ಕೇಳಿರುವುದಕ್ಕೆ, ಇಲ್ಲ ಎಂದು ಉತ್ತರ ನೀಡಿದ್ದೀರಿ. ಇದರ ಅರ್ಥ ವಿವರಣೆಯನ್ನು ಮಾನ್ಯ ಮಂತ್ರಿಗಳು ಹೇಳಬೇಕೆಂದು ಕೇಳಿ ಕೊಳ್ಳುತ್ತೇನೆ.

† ಶ್ರೀ ಕೆ. ಪ್ರಭಾಕರ್.—ಎಷ್ಟು ಗ್ರಾಮಗಳಲ್ಲಿ ನೀರಿಲ್ಲ ಎಂಬುದನ್ನು ಜನಸಂಖ್ಯೆಗೆ ಮಾಡಿದಾಗ ೮೦ ಗ್ರಾಮಗಳು ಎಂದು ಗೊತ್ತಾಯಿತು; ಆದಾದಮೇಲೆ ಜನರಿಂದ ಈ ಬಗ್ಗೆ ಬಂದಿರತಕ್ಕ ಅರ್ಜಿಗಳು ನಮ್ಮ ಗಮನಕ್ಕೆ ಬಂದಿಲ್ಲ ಎಂಬುದು ಅದರ ಅರ್ಥ. ಎಷ್ಟು ಗ್ರಾಮಗಳಲ್ಲಿ ನೀರಿಲ್ಲ ಎಂದು ಜನಸಂಖ್ಯೆಗೆ ಮಾಡಿದ್ದಾರೋ ಅಲ್ಲಿ ನೀರನ್ನು ಒದಗಿಸುವುದಕ್ಕೆ ಕಾರ್ಯಕ್ರಮವನ್ನು ಹೆಗದುಕೊಳ್ಳುತ್ತಿದ್ದೇವೆ ಎಂಬುದೂ ಅದರ ಅರ್ಥ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಸ್ವಾಮಿ, ನೀರಿನ ಅಭಾವ ಇದ್ದು ಆ ತಾಲ್ಲೂಕಿನಲ್ಲಿ ಕೊಳವೆ ಬಾವಿಗಳನ್ನು ತೋಡಿಸುವುದಕ್ಕೆ ಸರಕಾರದವರಿಗೆ ಬಂದ ಸಲಹೆಗಳು ಎಷ್ಟು ಎಂದು ಕೇಳಿರುವುದಕ್ಕೆ ೧೨ ಎಂದು ಹೇಳಿದ್ದೀರಿ. ಅದೇ ಮುಂದಿನ ಪ್ರಶ್ನೆಯಲ್ಲಿ ಸರ್ಕಾರದ ಗಮನಕ್ಕೆ ನೀರಿನ ಸಮಸ್ಯೆ ಬಗ್ಗೆ ಮಾಡುವಂತೆ ಕ್ರಮಗಳನ್ನು ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ ಇಲ್ಲ ಎಂದು ಉತ್ತರ ನೀಡಿದ್ದೀರಿ. ನನಗೆ ಇದರ ಅರ್ಥ ಸರಿಯಾಗಿ ಆಗುತ್ತಿಲ್ಲ. ಇನ್ನೊಮ್ಮೆ ಇದರ ಅರ್ಥವನ್ನು ಹೇಳಿ.

ಶ್ರೀ ಕೆ. ಪ್ರಭಾಕರ್.—ಜನಸಂಖ್ಯೆಗೆ ಹೇಳಿರುವ ಪ್ರಕಾರ ಇಂತಿಷ್ಟು ಗ್ರಾಮಗಳಲ್ಲಿ ನೀರಿಲ್ಲ ಎಂದು ಗೊತ್ತಾಗಿದ್ದು ಆದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ನಾವು ಕೈಗೊಂಡಿರುವ ಲೆಕ್ಕದ ಪ್ರಕಾರ ಇರುವ ಗ್ರಾಮಗಳಲ್ಲಿ ಕೊಳವೆ ಬಾವಿಗಳ ಸಂಖ್ಯೆಯನ್ನು ಕೊಟ್ಟಿದ್ದೇವೆ. ಬೇರೆ ಗ್ರಾಮಗಳಲ್ಲಿ ಕೂಡ ನೀರಿಲ್ಲವೇ ಎಂದು ಕೇಳಿದ್ದೀರಿ. ಆ ಬಗ್ಗೆ ನಮಗೆ ಬೇರೆಕಡೆ ಬಂದಿಲ್ಲ ಎಂದು ಹೇಳಿದ್ದೇವೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ನೀರಿನ ಅಭಾವವಿರತಕ್ಕ ೧೨ ಪಳ್ಳಿಗಳಿಗೆ ತಾವು ಎಷ್ಟು ಅವಧಿಯಲ್ಲಿ ಅಭಾವವನ್ನು ನೀಗಿಸುತ್ತೀರಿ ಎಂಬ ಬಗ್ಗೆ ನಿರ್ದಿಷ್ಟವಾದ ಉತ್ತರವನ್ನು ನೀಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಕೆ. ಪ್ರಭಾಕರ್.—ಈ ವರ್ಷದ ಅಖೈರಿನೊಳಗಾಗಿ ಮಾಡಿಕೊಡುತ್ತೇವೆ.

Villages Covered by electricity Programmes in Bidar District

221 SRI BHIMANNA KHANDRE (Bhalki)—Will the Minister of State for Information and Youth Services be pleased to state :

(a) the number of villages in Bidar District covered by various electricity programme or schemes (Villagewise, talukwise details) ; the number of villages which have not been electrified in each taluka with names of villages ;

(b) —

(i) the number of villages in Bidar District, Talukwise where electric poles have been erected but no wiring is done ;

(ii) the names of villages talukwise where poles have been erected, wiring done but no electric connection is given ;

(iii) the reasons ;

(c) whether Government intend to cover the remaining villages by electrification programme during the current year, if so the details of the programme ?

SRI K. H. SRINIVAS (Minister of State for Information and Youth Services) :

(a) 833 villages are covered by various schemes as per details given in Annexure-I ; 124 villages are yet to be electrified as per details given in Annexure-I (laid on the Table).**

(b) —

(i) 35 villages as per details given in Annexure-II (laid on the Table).**

(ii) One village.

(iii) These villages are not electrified due to non-availability of certain essential materials.

(c) This will be considered after the electrification of villages already included in the schemes is completed.

ಶ್ರೀ ಭೀಮಣ್ಣ ಖಂಡ್ರೆ—ಸ್ವಾಮಿ, ನನ್ನ 'ಅ' ಪ್ರಶ್ನೆಯಲ್ಲಿ ಬೀದರ ಜಿಲ್ಲೆಯಲ್ಲಿ ವಿದ್ಯುತ್ ಕಂಬಗಳನ್ನು ನೆಟ್ಟಿರುವ ಕಡೆಗಳಲ್ಲೆಲ್ಲಾ ತಂತಿ ಮಾರ್ಗವನ್ನು ಹಾಕದಿರುವ ಗ್ರಾಮಗಳ ಸಂಖ್ಯೆ ಎಷ್ಟು ಎಂದು ಕೇಳಿರುವುದಕ್ಕೆ ೩೫ ಗ್ರಾಮಗಳು ಎಂದು ಉತ್ತರ ಕೊಟ್ಟಿದ್ದೀರಿ. ಮತ್ತು ಏವರಗಳನ್ನೂ ಕೊಟ್ಟಿದ್ದೀರಿ. ಏತಕ್ಕೆ ಈ ಕೆಲಸ ಇನ್ನೂ ಆಗಿಲ್ಲ ? ಎಷ್ಟು ವರ್ಷದಿಂದ ಮಾಡಿಲ್ಲ ? ಮತ್ತು ಮೆಟೀರಿಯಲ್ಸ್ ಏಲ್ಲಾ ತಂದು ಮಾಡುವುದಕ್ಕೆ ಇನ್ನೂ ಎಷ್ಟು ದಿವಸಗಳು ಬೇಕು ?

† ಶ್ರೀ ಕೆ. ಎಚ್. ಶ್ರೀನಿವಾಸ್—ಎಷ್ಟು ವರ್ಷದಿಂದ ಈ ಕೆಲಸ ಮಾಡಿಲ್ಲ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಆದರೆ ವರ್ಷಗಟ್ಟಲೆಯಿಂದ ಕೆಲಸ ನಿಂತಿಲ್ಲ. ನಮ್ಮ ಕಾರ್ಯಕ್ರಮದ ಪ್ರಕಾರ ಒಂದೊಂದು ಹಳ್ಳಿಯಲ್ಲೂ ಕೆಲಸ ಮಾಡುತ್ತಾ ಬಂದಿದ್ದೇವೆ. ೩೫ ಹಳ್ಳಿಗಳಲ್ಲಿ ಕಂಬಗಳನ್ನು ನೆಡಿಸಿದ್ದೇವೆ. ಕಂಡಕ್ಟರ್ಸ್ ಸಿಕ್ಕದೆ ಇರುವುದರಿಂದ ಕೆಲಸ ನಿಧಾನವಾಗಿದೆ. ಅದನ್ನು ತರಿಸುವುದಕ್ಕೆ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಬಂದ ಮೇಲೆ ಪೂರ್ತಿಸಿಕೊಡುತ್ತೇವೆ. ಇನ್ನೊಂದು ಹಳ್ಳಿಯಲ್ಲಿ ಕಂಡಕ್ಟರ್ಸ್ ಹಾಕಿಯಾಗಿದೆ, ವೈರ್ ಹಾಕಿಯಾಗಿದೆ ಆದರೆ ಸ್ಟ್ರೀಟ್ ಲೈಟ್ ಫಿಟಿಂಗ್ಸ್ ಸಿಗದೇ ಇರುವುದರಿಂದ ಪವರ್ ಸಪ್ಲೈ ಕೊಟ್ಟಿಲ್ಲ. ಅದನ್ನು ಶೀಘ್ರವಾಗಿ ಮಾಡುತ್ತೇವೆ.

ಶ್ರೀ ಭೀಮಣ್ಣ ಖಂಡ್ರೆ—ನಾನು 'ಸಿ' ಪ್ರಶ್ನೆಯಲ್ಲಿ "Whether Government intend to cover the remaining villages by electrification programme during

**Copies placed in the Karnataka Legislature Library *vide* No. 26. dated 10-5-1979.

the current year, if so the details of the programme" ಎಂದು ಕೇಳಿದ್ದಕ್ಕೆ ತಾವು "this will be considered after the electrification of villages already included in the schemes is completed" ಎಂದು ಉತ್ತರ ಕೊಟ್ಟಿದ್ದೀರಿ. ಆದರೆ ಎಷ್ಟು ದಿವಸಗಳಲ್ಲಿ ಮಾಡಿಕೊಡುತ್ತೀರಿ ಎಂದು ಹೇಳಲಿಲ್ಲ. ಈಗಾಗಲೇ ಸೇರಿಸಲಾದ ಗ್ರಾಮಗಳ ವಿದ್ಯುತ್ತೀಕರಣವನ್ನು ಪೂರ್ತಿಗೊಳಿಸಿದ ನಂತರ ಇದನ್ನು ಪರಿಶೀಲಿಸಲಾಗುವುದು ಎಂದು ಹೇಳಿದ್ದೀರಿ. ಈ ರೀತಿ ಉತ್ತರ ಯಾರು ಬೇಕಾದರೂ ಕೊಡುತ್ತಾರೆ. ನಿಮ್ಮ ಕಾರ್ಯಕ್ರಮವನ್ನು ಮುಗಿಸಲಿಕ್ಕೆ ಎಷ್ಟು ಅವಧಿ ಬೇಕು ? ಮತ್ತು ಬೀದರ ಜಿಲ್ಲೆಯಲ್ಲಿ ಇನ್ನುಳಿದ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸೌಕರ್ಯವನ್ನು ಎಷ್ಟು ದಿವಸದಲ್ಲಿ ಒದಗಿಸಿಕೊಡುತ್ತೀರಿ ಎಂಬುದನ್ನು ತಿಳಿಸಿ.

ಶ್ರೀ ಕೆ. ಎಚ್. ಶ್ರೀನಿವಾಸ್—ಮಾನ್ಯ ಅಧ್ಯಕ್ಷರೇ ಪ್ರತಿವರ್ಷ ನಾವು ಸುಮಾರು ೬೫೦ ಹಳ್ಳಿಗಳಿಗೆ ವಿದ್ಯುತ್ತೀಕರಣವನ್ನು ಮಾಡಬೇಕೆಂದು ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ಅದೇ ರೀತಿ ಈ ವರ್ಷದಲ್ಲೇ ಈ ಕಾರ್ಯಕ್ರಮಗಳನ್ನು ಮುಗಿಸಬೇಕೆಂಬುದು ಸರ್ಕಾರದ ಇಚ್ಛೆ. ಈಗ ಇರುವ ತೊಂದರೆ ಏನೆಂದರೆ ಕೆಲಸ ನಿಧಾನವಾಗುವುದಕ್ಕೆ ನಾನಾ ಕಾರಣಗಳಿರುತ್ತವೆ. ಕೆಲವು ಕಾರಣಗಳು ನಮ್ಮ ಮೇಲೆ ಅವಲಂಬಿತವಾದರೆ ಇನ್ನು ಕೆಲವು ಬೇರೆಯವರ ಮೇಲೆ ಅವಲಂಬಿತವಾಗಿರುತ್ತವೆ. ವಿದ್ಯುಚ್ಛಕ್ತಿ ಪೂರೈಕೆಗೆ ಬೇಕಾಗತಕ್ಕ ವೈರ್‌ಗಳು ಮತ್ತಿತರ ಸಾಧನ ಸಲಕರಣೆಗಳನ್ನು ಬೇರೆಯವರು ಉತ್ಪಾದನೆ ಮಾಡಿಕೊಡಬೇಕು. ನಾನಾ ಕಾರಣದಿಂದ ಅವರು ಉತ್ಪಾದನೆ ಮಾಡಿಕೊಡುವುದು ನಿಧಾನವಾಗಿ ನಮಗೆ ಬರಬೇಕಾದ ಸಾಧನ ಸಲಕರಣೆಗಳು ಸಕಾಲದಲ್ಲಿ ಸರಬರಾಜಾಗದೇ ಹೋಗಬಹುದು. ಪವರ್ ಕಟ್ ಇರುವುದರಿಂದ ಅಲ್ಯೂಮಿನಿಯಂ ಫ್ಯಾಕ್ಟರಿಗೆ ಪವರ್ ಕೊಡುವುದು ಕಡಿಮೆಯಾಗಿದೆ. ಹೀಗಾಗಿ ಅಲ್ಯೂಮಿನಿಯಂ ತಯಾರಿಕೆಯಲ್ಲಿ ಖೋತಾ ಆಗಿದೆ. ಇದರಿಂದ ನಮಗೆ ಕಂಡಕ್ಟರ್ಸ್ ಸಿಗುವುದಿಲ್ಲ. ಹೀಗೆ ನಾನಾ ರೀತಿಯ ವಿಷಯವ್ಯತ್ಯಗಳಿಂದ ನಿಧಾನವಾಗುತ್ತವೆ. ಹೀಗಾಗಿ ನಾವು ಪ್ರಾಮಾಣಿಕವಾಗಿ ಸಕಾಲದಲ್ಲಿ ಮುಗಿಸುವುದಕ್ಕೆ ಪ್ರಯತ್ನಪಟ್ಟರೂ ಕೂಡ ಇಷ್ಟೇ ದಿವಸದಲ್ಲಿ ಕೆಲಸವನ್ನು ಮುಗಿಸಿಕೊಡುತ್ತೇವೆ ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಆದರೆ ಹೆಚ್ಚಿನ ಗಮನವನ್ನು ಬೇಕಾದರೆ ಕೊಡುತ್ತೇವೆಂದು ಹೇಳಬಹುದು.

ಶ್ರೀ ಭೀಮಣ್ಣ ಖಂಡ್ರೆ—ಸರ್ಕಾರ ಯಾವಾಗಲೂ ಬೀದರ್ ಜಿಲ್ಲೆಯನ್ನು ಕಡೆಗಣಿಸುತ್ತಾ ಇರುತ್ತದೆ. ಈಗಲಾದರೂ ಎಷ್ಟು ಬೇಗ ಮಾಡಿಕೊಡುತ್ತೀರಿ ಎಂಬ ಬಗ್ಗೆ ಆಶ್ವಾಸನೆಯನ್ನು ಕೊಡುತ್ತೀರಾ? ಅಲ್ಲಿ ಅರ್ಧ ಭಾಗವೂ ವಿದ್ಯುತ್ತೀಕರಣದ ಕೆಲಸ ಆಗಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್—ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ವಿದ್ಯುತ್ತೀಕರಣದಲ್ಲಿ ಎಲ್ಲೆಲ್ಲಿ ಸಾಕಷ್ಟು ಪ್ರಮಾಣದಲ್ಲಿ ವಿದ್ಯುತ್ತೀಕರಣ ಕಾರ್ಯ ಆಗಿಲ್ಲ ಆ ಕಡೆ ಜಾಸ್ತಿ ಅದ್ಯತೆ ಕೊಟ್ಟು ಕೆಲಸ ಮಾಡಿಸಬೇಕು ಎಂದು ಹೇಳುವ ತತ್ವವನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದ್ದರಿಂದಲೆ ಪೂರ್ಣ ದೃಷ್ಟಿಕೋನದಿಂದ ನೋಡಬೇಕು ಎಂಬ ವಿಚಾರವನ್ನು ಅಧಿಕಾರಿಗಳಿಗೆ ಈಗಾಗಲೆ ತಿಳಿಸಿದ್ದೇನೆ. ಇದೇ ಸಂದರ್ಭದಲ್ಲಿ ಬೀದರ ಜಿಲ್ಲೆಯ ಹಳ್ಳಿಗಳಿಗೆ ಹೆಚ್ಚು ಅದ್ಯತೆ ಕೊಡಬೇಕೆಂಬುದು ಸ್ಪಷ್ಟಪಟ್ಟರೆ ಖಂಡಿತವಾಗಿ ಕೊಡುತ್ತೇವೆ.

ಶ್ರೀ ಭೀಮಣ್ಣ ಖಂಡ್ರೆ—ತಾವು ಕೊಟ್ಟ ಇನ್‌ಫರ್‌ಮೇಷನ್ ಪ್ರಕಾರ ವಿವಿಧ ಯೋಜನೆಗೆ ಒಳಪಟ್ಟಿರುವ ಗ್ರಾಮಗಳು ೩೩೩, ಇನ್ನೂ ವಿದ್ಯುತ್ತೀಕರಣಗೊಳಿಸಬೇಕಾಗಿರುವ ಗ್ರಾಮಗಳು ೧೨೪. ಅಂದರೆ ಒಟ್ಟು ೪೫೭ ಆಯಿತು. ಆದರೆ ಒಟ್ಟು ಇರುವುದು ೫೫೪ ಹಳ್ಳಿಗಳು. ತಾವು ೪೫೭ ಎಂದು ಯಾಕೆ ಕೊಟ್ಟಿದ್ದೀರಿ ? ಇದು ಆಕಸ್ಮಾತ್ತಾಗಿ ತಪ್ಪಾಗಿ ಬಿದ್ದಿದೆಯೋ ಅಥವಾ ಬೇಕೆಂದೇ ಬಿಟ್ಟಿದ್ದೀರಾ ?

ಶ್ರೀ ಕೆ. ಎಚ್. ಶ್ರೀನಿವಾಸ್—ನಮಗೆ ಸಿಕ್ಕಿರುವ ಅಂಕಿ ಸಂಖ್ಯೆಗಳ ಪ್ರಕಾರ ಕೊಟ್ಟಿದ್ದೇವೆ. ಒಂದು ವೇಳೆ ತಪ್ಪಾಗಿದ್ದರೆ ಪರಿಶೀಲನೆ ಮಾಡೋಣ.

ಶ್ರೀ ಭೀಮಣ್ಣ ಖಂಡ್ರೆ—ಈ ೧೨೦ ಹಳ್ಳಿಗಳನ್ನು ಬಿಟ್ಟಿರುವುದಕ್ಕೆ ಕಾರಣ ಏನು ?

ಶ್ರೀ ಕೆ. ಎಚ್. ಶ್ರೀನಿವಾಸ್—ರಾಜ್ಯದಲ್ಲಿ ಅನೇಕ ಹಳ್ಳಿಗಳಿಗೆ ವಿದ್ಯುತ್ತೀಕರಣ ಆಗಬೇಕಾಗಿದೆ. ೨೬ ಸಾವಿರ ಹಳ್ಳಿಗಳ ಪೈಕಿ ಈಗಾಗಲೇ ೧೯ ಸಾವಿರ ಹಳ್ಳಿಗಳಿಗೆ ಮಾಡಿದ್ದೇವೆ. ಇನ್ನೂ ಆಗಬೇಕಾಗಿರುವುದನ್ನ ೧೦ನೇ ಕಾರ್ಯಕ್ರಮದಲ್ಲಿ ತೆಗೆದುಕೊಂಡು ಮಾಡುತ್ತೇವೆ. ಏಕೆಂದರೆ ಈ ಹಳ್ಳಿಗಳನ್ನು ಬಿಟ್ಟಿದ್ದೀರಿ ಮಾ ಕೇವರೆ ವಿದ್ಯುತ್ತೀಕರಣ ಆಗಿಲ್ಲ, ಆದ್ದರಿಂದ ಬಿಟ್ಟಿದ್ದೇವೆ.

ಶ್ರೀ ಭೀಮಣ್ಣ ಖಂಡ್ರೆ—ತಾವು ಉತ್ತರದಲ್ಲಿ ೧೨೪ ಗ್ರಾಮಗಳಿಗೆ ಇನ್ನೂ ವಿದ್ಯುತ್ತೀಕರಣಗೊಳಿಸ ಬೇಕಾಗಿದೆ ಎಂದು ಹೇಳುತ್ತೀರಿ. ಆದರೆ ನಾನು ೨೨೪ ಪಳ್ಳಿಗಳು ಎಂದು ಪೇಳುತ್ತಿದ್ದೇನೆ. ಈ ರೀತಿ ತಪ್ಪು ಮಾಹಿತಿ ಏತಕ್ಕೆ ಕೊಟ್ಟಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್ -ಅದನ್ನು ಸರಿಯಾಗಿ ಪರಿಶೀಲನೆ ಮಾಡಿ ತಮಗೆ ಸರಿಯಾದ ಹಾಗೂ ನಿಖರವಾದ ಮಾಹಿತಿಯನ್ನು ಒದಗಿಸುತ್ತೇನೆ.

1-30 P.M.

Suspension of Collection of water rate and Betterment Levy on T.B P. dry-*cum*-wet Lands,

447 SRI B. E. RAMAIAH (Siruguppa)—Will the Chief Minister be pleased to state :—

(a) whether the Government is aware that water is not given to the 20,000 acres of Dry-*cum* Wet lands under TBP in Bellary District ;

(b) whether the Government is aware that the water rate and betterment levy are demanded by Government, even though water has not been supplied ;

(c) whether the Government intend to take immediate steps to suspend collection of water rate and betterment levy ?

SRI D. DEVARAJ URS (Chief Minister)—

(a) The total quantity of water as stipulated has been supplied to the Dry-*cum*-Wet area under low level canal in Bellary District and area actually irrigate is 35645 acres during 1977-78 as against localised area of 58545 acres. Hence utilisation of water to an area of about 23,000 acres has not been made by irrigaters due to following reasons :

1. Non levelling of lands.
2. Non-utilising of water generally during night time.
3. Shifting of Rabi period (November to February) to summer period January to April to introduce block system.
4. Large holdings.
5. Absentee land-holders.
6. Non-cultivation of lands belonging to charitable trusts like temples etc.
7. Un-authorised irrigation.
8. Violation of cropping pattern.

(b) Water rate is being levied whenever water is made available. Instances where betterment levy is levied even though water was not made available to the lands have not come to the notice.